ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24

ಆಯುಕ್ತರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 16.12.2023

**ಸುತ್ತೋಲೆ**

ವಿಷಯ: ಇಲಾಖಾ ವ್ಯಾಪ್ತಿಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜನೀಯರಿಂಗ್ ಕಾಲೇಜುಗಳಲ್ಲಿ ಪ್ರತಿ ತಿಂಗಳ 3ನೇ ಶನಿವಾರ ದಂದು ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಸಿಬ್ಬಂದಿಗಳು ಶ್ರಮದಾನ ಮಾಡುವ ಬಗ್ಗೆ.

ಉಲ್ಲೇಖ: 1) ರಾಷ್ಟ್ರೀಯ ಸೇವಾ ಯೋಜನೆ ಇಲಾಖಾ ಸಲಹಾ ಸಮಿತಿ ನಡಾವಳಿ ದಿನಾಂಕ: 30.10.2023
2) ಇಲಾಖಾ ಸುತ್ತೋಲೆ ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24 ದಿನಾಂಕ: 06.11.2023

*****

ಗಣನೀಯ ಸೇವೆ ಸಲ್ಲಿಸಿದ ತಾಂತ್ರಿಕ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶಕ್ಕೆ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ರಾಯಚೂರಿನ ರಾಷ್ಟ್ರೀಯ ಸೇವಾ ಯೋಜನಾ ಕೋಶಕ್ಕೆ ಗೌರವಾನ್ವಿತ ರಾಜ್ಯಪಾಲರು ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕಾರವನ್ನು ದಿನಾಂಕ: 11.10.2023 ರಂದು ರಾಜಭವನದ ಬ್ಯಾಂಕ್ವೆಟ್ ಹಾಲ್ ನಲ್ಲಿ ಪ್ರಧಾನ ಮಾಡಿರುವುದು ಹೆಮ್ಮೆಯ ವಿಷಯವಾಗಿದೆ. ಇಲಾಖೆಗೆ ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕಾರ ದೊರಕುವಲ್ಲಿ ಉತ್ತಮ ಕಾರ್ಯನಿರ್ವಹಣೆ ತೋರಿದ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಕಾರ್ಯಕ್ರಮಾಧಿಕಾರಿಗಳಿಗೆ ಮತ್ತು ಪ್ರಾಚಾರ್ಯರಿಗೆ ಇಲಾಖೆಯು ಅಭಿನಂದಿಸುತ್ತದೆ.

ಉಲ್ಲೇಖ (01) ಮತ್ತು (02) ರಂತೆ ಪ್ರತಿ ತಿಂಗಳ 3 ನೇ ಶನಿವಾರದಂದು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜನೀಯರಿಂಗ್ ಕಾಲೇಜುಗಳಲ್ಲಿ ಸಂಸ್ಥೆಯ ಪ್ರಾಂಗಣವನ್ನು ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕ, ಬೋಧಕ ಮತ್ತು ಕಛೇರಿಯ ಸಿಬ್ಬಂದಿಯವರನ್ನೊಳಗೊಂಡು ಶ್ರಮದಾನದ ಮೂಲಕ ಶುಚಿಯಾಗಿರಿಸಲು ಪ್ರಾಚಾರ್ಯರುಗಳಿಗೆ ತಿಳಿಸಿದೆ. ತಮ್ಮ ಸಂಸ್ಥೆಯ ಪ್ರಾಂಗಣದ ಸ್ವಚ್ಛತೆಗಾಗಿ ಕೈಗೊಳ್ಳಬಹುದಾದ ಕ್ರಮಗಳಿಗೆ ವಿದ್ಯಾರ್ಥಿ ಉಪನ್ಯಾಸಕರು ಮತ್ತು ವಿಭಾಗ ಮುಖ್ಯಸ್ಥರುಗಳು ತಾಂತ್ರಿಕ ಸ್ಪರ್ಷ ನೀಡಲು ಕಾರ್ಯೋನ್ಮುಖರಾಗಿ ವಿದ್ಯಾರ್ಥಿಗಳಿಂದಲೇ ಪ್ರಾಂಗಣದ ಸ್ವಚ್ಛತೆಗಾಗಿ ಉಪಕರಣಗಳನ್ನು ತಯಾರಿಸಿ ಅದೇ ಉಪಕರಣಗಳ ಬಳಕೆ ಕಾರ್ಯವನ್ನು ಸುಲಭವಾಗಿಸುವ ಬಗ್ಗೆ ಪರಿಶೀಲಿಸಿ ಅನುಷ್ಠಾನಗೊಳಿಸುವುದು.

ಈ ಮೂಲಕ ಸಂಸ್ಥೆಯ ಆವರಣ ಶುಚಿಯಾಗಿಸುವ ಜೊತೆಗೆ ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಜ್ಞಾನವನ್ನು ನಿಜಾರ್ಥದಲ್ಲಿ ವೃದ್ಧಿಸಿದಂತಾಗುವುದೆಂದು ಆಶಿಸಲಾಗಿದೆ. ರಾ.ಸೇ.ಯೋ/ IDP ಯಲ್ಲಿನ ಸಂಸ್ಥೆಯ ಅಭಿವೃದ್ಧಿಗಾಗಿ ಅಥವಾ ನಿರ್ವಹಣೆಗಾಗಿ ಮೀಸಲಿರಿಸಿದ ಮೊತ್ತವನ್ನು ನಿಯಮನುಸಾರ ಬಳಸಿಕೊಳ್ಳಲು ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ:
1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜನೀಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ರಾಜ್ಯ ಎನ್ ಎಸ್ ಎಸ್ ಅಧಿಕಾರಿಗಳು ರಾಜ್ಯ ಎನ್.ಎಸ್.ಎಸ್ ಕೋಶ ಬೆಂಗಳೂರು -ಇವರ ಮಾಹಿತಿಗಾಗಿ
3. ಇ – ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

D:\16.03.2021\DTE All Files-2023-24\IDP 2023-24